ಇ) ಕರ್ನಾಟಕದ ಕರಾವಳಿ ತಟದ ಪ್ರದೇಶದಲ್ಲಿ ಐದು ಕರಾವಳಿ ಕಾವಲು ಪೊಲೀಸ್ ಠಾಣೆಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ

1467 (1681) ಶ್ರೀ ಲಾಲಾಜಿ ಆರ್ ಮೆಂಡನ್ (ಕಾಪು) – ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೆಜಮಾಡಿಯಲ್ಲಿ ಸರ್ಕಾರದ ರಾಜೀವ ಗಾಂಧಿ ಕ್ರೀಡಾಂಗಣ ಇರುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ,

ಆ) ಹಾಗಿದ್ದಲ್ಲಿ, ಇದರ ನಿರ್ವಹಣೆಯನ್ನು ಸ್ಥಳೀಯ ಗ್ರಾಮ ಪಂಚಾಯಿತಿಗೆ ನೀಡಬಹುದೇ,

ಇ) ಸರ್ಕಾರ ಇದರ ರಚನೆಗೆ ವ್ಯಯ ಮಾಡಿರುವ ಹಣವೆಷ್ಟು?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು)

ಅ) ಇದೆ

ಆ) ಜಿಲ್ಲಾ ಪಂಚಾಯತಿ ಮೂಲಕ ಸದರಿ ಕ್ರೀಡಾಂಗಣದ ನಿರ್ವಹಣೆಯನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು

ಇ) ಈ ಯೋಜನೆಗೆ ಸರ್ಕಾರವು ಅನುದಾನವನ್ನು ನೀಡಿರುವುದಿಲ್ಲ

1468 (2214) ಶ್ರೀ ಲಾಲಾಜಿ ಆರ್ ಮೆಂಡನ್ (ಕಾಪು) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗಾರ್ಜುನ ಉಷ್ಣಸ್ಥಾವರ ಸ್ಥಾಪಿಸಲು ಅನುಮತಿ ನೀಡಿದ ವರ್ಷ ಯಾವುದು,

ಆ) ಈ ಸ್ಥಾವರಕ್ಕೆ ನೀಡಿದ ಸರ್ಕಾರಿ ಜಮೀನು ಎಷ್ಟು,